**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**

**ಸಿ.ಸಿ.ನಂ. 884 /2019**

ದಿನಾಂಕಃ **06.03.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು ಃ | ಡಿ ಟಿ ಮಹೇಶ್ | ಚಾಸಾ-1, ಪ್ರಾಸ.-1 |
| ತಂದೆಯ ಹೆಸರುಃ | ತಿಮ್ಮಯ್ಯ | |
| ವಯಸ್ಸು ಃ | 46 ವರ್ಷ | |
| ಉದ್ಯೋಗ ಃ | ವಾಟರ್ ಮ್ಯಾನ್ | |
| ವಾಸ ಃ | ಬೀರೂರು | |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಮೃತ ವ್ಯಕ್ತಿ ನನ್ನ ಅಕ್ಕನ ಮಗ. ಚಾಸಾ-2 ರವರು ನನಗೆ ಗೊತ್ತು. 2018 ನೇ ಸಾಲಿನಲ್ಲಿ ಬೆಳಗ್ಗೆ 9.15 ಗಂಟೆ ಸಮಯದಲ್ಲಿ ಬೀರೂರು ಗಣಪತಿ ಪೆಂಡಾಲ್ ಬಳಿ ಇದ್ದಾಗ ಚಾಸಾ-2 ರವರು ದೂರವಾಣಿ ಕರೆ ಮಾಡಿ ನನ್ನ ಅಕ್ಕನ ಮಗನಿಗೆ ಅಪಘಾತವಾಗಿದ್ದು ಬೀರೂರು ಆಸ್ಪತ್ರೆಗೆ ಬನ್ನಿ ಎಂದು ತಿಳಿಸಿರುತ್ತಾರೆ. ನಾನು ಆಸ್ಪತ್ರೆಗೆ ಹೋಗಿ ನೋಡಿದಾಗ ನನ್ನ ಅಕ್ಕನ ಮಗ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಅಂಗಡಿ ತಿಮ್ಮಣ್ಣನವರ ಅಂಗಡಿ ಮುಂಭಾಗದಲ್ಲಿ ಅಪಘಾತವಾಗಿರುತ್ತದೆ ಎಂದು ತಿಳಿಸಿರುತ್ತಾರೆ. ನನ್ನ ಅಕ್ಕನ ಮಗ ಮಾರುತಿ ಮೋಟಾರ್ಸ ನಲ್ಲಿ ಕೆಲಸ ಮಾಡುತ್ತಿದ್ದು ಬೆಳಗ್ಗೆ 9.15 ಗಂಟೆಗೆ ನನ್ನ ಅಕ್ಕನ ಮಗ ಬೈಕಿನಲ್ಲಿ ತಿಮ್ಮಣ್ಣನ ಅಂಗಡಿ ಮುಂಭಾಗ ನಿಂತಿದ್ದಾಗ ಅಜ್ಜಂಪುರ ಕಡೆಯಿಂದ ರಸ್ತೆ ಎಡಭಾಗದಿಂದ ಬಂದು ಬಲಭಾಗದಲ್ಲಿ ನಿಂತಿದ್ದ ನನ್ನ ಅಕ್ಕನ ಮಗನಿಗೆ ಡಿಕ್ಕಿಪಡಿಸಿದ ಪರಿಣಾಮ ಬಿದ್ದು ತಲೆಗೆ ಗಾಯಪಡಿಸಿರುತ್ತಾರೆ ಎಂದು ತಿಳಿಸಿರುತ್ತಾರೆ. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಚಾಸಾ-11 ರವರೊಂದಿಗೆ ಶಿವಮೊಗ್ಗದ ಮ್ಯಾಕ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿಂದ ಹೆಚ್ಚಿನ ಚಿಕಿತ್ಸೆಗಾಗಿ ಮಣಿಪಾಲ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಮಣಿಪಾಲ ಆಸ್ಪತ್ರೆಯಲ್ಲಿ ಮಧ್ಯಾಹ್ನ 3.00 ಗಂಟೆಗೆ ನನ್ನ ಅಕ್ಕನ ಮಗ ಮರಣ ಹೊಂದಿರುತ್ತಾನೆ. ಈ ವಿಚಾರವಾಗಿ ಬೀರೂರು ಠಾಣೆಗೆ ಆರೋಪಿ ವಿರುದ್ಧ ದೂರನ್ನು ನೀಡಿರುತ್ತೇನೆ. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**(**ಈ ಹಂತದಲ್ಲಿ ಸಾಕ್ಷಿಯು ಅಭಿಯೊಜನೆಯ ಪ್ರಕರಣಕ್ಕೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು**)**

ಪಾಟೀಸವಾಲುಃ ಮಾನ್ಯ ಸಸಅ. ರವರಿಂದ ಃ

ದಿಃ 03.12.2018 ರಂದು ಚಾಸಾ-2 ರವರು ನನಗೆ ದೂರವಾಣಿ ಕರೆ ಮಾಡಿ ಅಪಘಾತದ ವಿಚಾರ ತಿಳಿಸಿರುತ್ತಾನೆ ಎಂದರೆ ಸರಿ. ನಂತರ ಅಪಘಾತದ ಬಗ್ಗೆ ತಿಳಿಯಲಾಗಿ ಮೃತ ವ್ಯಕ್ತಿ ದೋಗಿಹಳ್ಳಿ ತಿಮ್ಮಪ್ಪನ

ಅಂಗಡಿ ಮುಂಭಾಗ ಟಾರು ರಸ್ತೆಯಲ್ಲಿ ತನ್ನ ಬಾಬ್ತು ಕೆಎ-14 ಇಬಿ-6884 ರ ಅಪಾಚಿ ಬೈಕನ್ನು ನಿಲ್ಲಿಸಿಕೊಂಡು ಮಾತನಾಡುತ್ತಿದ್ದಾಗ ಅಜ್ಜಂಪುರ ಕಡೆಯಿಂದ ಜೀಪು ಚಾಲಕ ಕೆಎ-03 0770 ನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿ ಡಿಕ್ಕಿಪಡಿಸಿದ ಪರಿಣಾಮ ಅಪಘಾತವಾಯಿತು ಎಂದರೆ ಸರಿ. ಅಪಘಾತದ ಪರಿಣಾಮ ನನ್ನ ಅಕ್ಕನ ಮಗನ ತಲೆಗೆ, ಎಡಗಾಲಿಗೆ ತೀವ್ರಗಾಯವಾಯಿತು ಎಂದರೆ ಸರಿ. ನನ್ನ ಅಕ್ಕನ ಮಗನ ಸಾವಿಗೆ ಆರೋಪಿ ರವಿಕುಮಾರ್ ರವರ ಅತೀವೇಗ ಮತ್ತು ಅಜಾಗರೂಕತೆಯ ಚಾಲನೆಯೇ ಕಾರಣ.

<u>ಪಾಟೀಸವಾಲುಃ ಶ್ರೀ ಪಿ ಆರ್ ಸಿ ಆರೋಪಿ ಪರ ವಕೀಲರಿಂದಃ</u>

ಚಾಸಾ-2 ರವರು ದೂರವಾಣಿ ಕರೆ ಮಾಡಿ ತಿಳಿಸಿದ ಮೇರೆಗೆ ಅಪಘಾತದ ವಿಚಾರ ತಿಳಿಯಿತು ಎಂದರೆ ಸರಿ. ದೂರವಾಣಿ ಕರೆ ನಂತರ ನಾನು ಆಸ್ಪತ್ರೆಗೆ ಹೋಗಿರುತ್ತೇನೆ ಎಂದರೆ ಸರಿ. ಆಸ್ಪತ್ರೆಯಲ್ಲಿ ಮೃತ ವ್ಯಕ್ತಿಗೆ ಪ್ರಜ್ಞೆ ಇರಲಿಲ್ಲ. ನಾನು ಆಸ್ಪತ್ರೆಗೆ ತಲುಪಿದಾಗ ಬೆಳಗ್ಗೆ 11.00 ರಿಂದ 11.30 ಆಗಿತ್ತು ಎಂದರೆ ಸಾಕ್ಷಿ 9.30 ಆಗಿತ್ತು ಎಂದು ನುಡಿಯುತ್ತಾರೆ. ಮಧುಸೂದನ್ ರವರನ್ನು ಅಪಘಾತವಾದ ನಂತರ ಆಸ್ಪತ್ರೆಯಲ್ಲಿ ನೋಡಿರುತ್ತೇನೆ ಎಂದರೆ ಸರಿ. ಆಸ್ಪತ್ರೆಯಿಂದ ಅಪಘಾತದ ಸ್ಥಳಕ್ಕೆ ಹೋಗಿರುತ್ತೇನೆ. ಅಪಘಾತದ ಸಮಯದಲ್ಲಿ ನಾನು ಸ್ಥಳದಲ್ಲಿ ಹಾಜರಿರಲಿಲ್ಲ ಎಂದರೆ ಸರಿ.

ಪ್ರಶ್ನೆಃ ಆರೋಪಿಯನ್ನು ಪೋಲಿಸರು ತೋರಿಸಿದ ಮೇರೆಗೆ ನನಗೆ ಆತನ ಹೆಸರು ವಿಳಾಸ ತಿಳಿಯಿತು.

ಉತ್ತರಃ ಆರೋಪಿಯೂ ಸಹ ಆಸ್ಪತ್ರೆಯಲ್ಲಿದ್ದು ಆತನೇ ಅಪಘಾತಪಡಿಸಿರುತ್ತಾನೆ ಎಂದು ನನ್ನ ಬಳಿ ಹೇಳಿರುತ್ತಾನೆ.

ಮೃತ ವ್ಯಕ್ತಿ ನನ್ನ ಸಂಬಂಧಿ ಎಂದರೆ ಸರಿ. ಅಪಘಾತದ ಸ್ಥಳಕ್ಕೆ ಹೋದ ಮೇಲೆ ನನಗೆ ಎಡ ಬಲ ತಿಳಿಯಿತು ಎಂದರೆ ಸಾಕ್ಷಿ ಅಲ್ಲಿ ರಕ್ತದ ಕಲೆಗಳಿದ್ದವು ಎಂದು ನುಡಿಯುತ್ತಾರೆ. ಮಧುಸೂದನ್ ರವರು ಮಧ್ಯಾಹ್ನ 3.00 ಗಂಟೆಗೆ ಮರಣ ಹೊಂದಿರುತ್ತಾರೆ.

<u>ಮರು ವಿಚಾರಣೆ ಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.